ಬಗ್ಗೆ ಯಾರಿಗೂ ತಿಳಿಸಬಾರದು. ನನ್ನನ್ನು ಹುಡುಕುವ ಪ್ರಯತ್ನ ಮಾಡಬಾರದು. ನಾನು ಯಾರಿಗೂ ಸಿಗುವುದಿಲ್ಲ.

ಪ್ರೊಫೆಸರ್ ಸ್ವಾಮಿನಾಥನ್

"ಓ ಪ್ರೊಫೆಸರ್... ನೀನೊಬ್ಬ ಮೋಸಗಾರ... ನೀನೊಬ್ಬ ಮೋಸಗಾರ... ನನ್ನನ್ನು ಪ್ರಪಾತಕ್ಕೆ ತಳ್ಳಿ ನಡೆದುಬಿಟ್ಟೆ... ನೀನೊಬ್ಬ ಮೋಸಗಾರ..." ಎಂದು ಬಡಬಡಿಸುತ್ತಾ ನಡುಗುತ್ತಿದ್ದ ನನ್ನ ದೇಹವನ್ನು ತಹಬಂದಿಗೆ ತರಲಾರದೆ ಹಾಲಿನಲ್ಲಿ ಅತ್ತಿಂದಿತ್ತ ಓಡಾಡತೊಡಗಿದೆ. ಸಂಜೆಯಾಗತೊಡಗಿತು.

ಈ ನಿರ್ಜೀವ ವಸುಂಧರೆಯನ್ನು ಏನು ಮಾಡುವುದು? ಏನು ಮಾಡುವುದು?

ಅವಳು ಯಂತ್ರವಲ್ಲ. ಅವಳಿಗೊಂದು ಆತ್ಮವಿದೆ ಎಂದು ಪದೇ ಪದೇ ಅನಿಸುತ್ತಿತ್ತು. ನಮ್ಮ ಸಂಸ್ಕೃತಿಯ ಪ್ರಕಾರ ಅವಳಿಗೆ ಮೋಕ್ಷ ದೊರಕಿಸಬೇಕು ಎಂದು ನಿರ್ಧರಿಸಿದವನೇ ಫ್ಲ್ಯಾಟಿಗೆ ಬೀಗ ಹಾಕಿ ಕಾರು ಹತ್ತಿ ಹೊರಟೆ. ನಗರವನ್ನೆಲ್ಲಾ ಹುಡುಕಾಡಿ ದಪ್ಪನಾದ, ಅಗಲದ ಮತ್ತು ಉದ್ದವಾದ ಎರಡು ಪ್ಲಾಸ್ಟಿಕ್ ಬ್ಯಾಗುಗಳನ್ನು ಖರೀದಿಸಿದೆ. ಕೆಲವೊಂದು ಪೂಜಾಸಾಮಗ್ರಿಗಳೊಂದಿಗೆ ಫ್ಲ್ಯಾಟಿಗೆ ಮರಳಿದೆ.

ನಾನು ಮುಂಬೈನಲ್ಲಿದ್ದಾಗ, ನನ್ನ ಬಾಲ್ಯದಲ್ಲಿಯೇ ಸಾವನ್ನಪ್ಪಿದ್ದ ತಂದೆತಾಯಿಯರನ್ನು ಹೂತಿದ್ದ ನಮ್ಮ ಹಳ್ಳಿಯ ಜಮೀನಿಗೆ ಬೇಲಿ ಹಾಕಿಸಿ, ಅದರಲ್ಲಿ ಸಣ್ಣಮನೆಯೊಂದನ್ನು ಕಟ್ಟಿಸಿ ಅದನ್ನು ಫಾರ್ಮ್‌ಹೌಸ್ ಮಾಡಿಸಿದ್ದೆ. ನಮ್ಮ ತಂದೆತಾಯಿಯರಿಗೆ ಅಲ್ಲಿ ಸ್ಮಾರಕವನ್ನೂ ನಿರ್ಮಿಸಿದ್ದೆ.

ವಸುಂಧರೆಗೆ ನಮ್ಮ ಕೂಡುಜೀವನದ ವಾರ್ಷಿಕೋತ್ಸವಕ್ಕಾಗಿ ತಂದಿದ್ದ ಹೊಸ ಬಟ್ಟೆ ತೊಡಿಸಿ, ಆಕೆಯ ದೇಹವನ್ನು ಪ್ಲಾಸ್ಟಿಕ್ ಬ್ಯಾಗಿನಲ್ಲಿ ತುಂಬಿಕೊಂಡು ಕಾರಿನಲ್ಲಿ ನಮ್ಮ ಹಳ್ಳಿಯ ಹೊರಗಿದ್ದ ಫಾರ್ಮ್‌ಹೌಸ್ ತಲುಪಿದಾಗ ಮಧ್ಯರಾತ್ರಿಯಾಗಿತ್ತು. ಕತ್ತಲು ಸುತ್ತಲೂ ತುಂಬಿತ್ತು. ಗೇಟಿನ ಬೀಗ ತೆಗೆದು ಕಾರನ್ನು ಒಳಗೆ ನಡೆಸಿ ಫಾರ್ಮ್‌ಹೌಸಿನಲ್ಲಿದ್ದ ಗುದ್ದಲಿ, ಪಿಕಾಸಿಗಳನ್ನು ಹೊರಗೆ ತಂದೆ.

ಬ್ಯಾಟರಿಯ ಬೆಳಕಿನಲ್ಲಿ ನಮ್ಮ ತಂದೆತಾಯಿಯರ ಸ್ಮಾರಕದ ಪಕ್ಕದಲ್ಲಿ ಗುಂಡಿಯೊಂದನ್ನು ತೋಡಿದೆ. ಪೂಜೆ ಸಲ್ಲಿಸಿ ವಸುಂಧರೆಯ ದೇಹವನ್ನು ಅದರೊಳಗೆ ಇಳಿಸಿ ಮಣ್ಣು ತುಂಬಿದಾಗ ನನಗಾಗುತ್ತಿದ್ದ ದುಃಖ ಅಷ್ಟಿಷ್ಟಲ್ಲ.

"ಓ ಮೈ ಲವ್... ನಿನಗೆ ಆ ದೇವರು ಮೋಕ್ಷವನ್ನು ಕರುಣಿಸಲಿ..." ಎಂದು ಕೈಮುಗಿದು ನಿಂತ ನಾನು ಬಿಕ್ಕಿ ಬಿಕ್ಕಿ ಅಳತೊಡಗಿದೆ. ನನ್ನ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಹರಿಯತೊಡಗಿತು.

## ಟಿ. ತಿಮ್ಮಪ್ಪ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ತಿಪ್ಪೂರು ಗ್ರಾಮದವರು. ಮೈಸೂರು ವಿಶ್ವವಿದ್ಯಾಲಯದ ಮೆಕ್ಯಾನಿಕಲ್ ಎಂಜನಿಯರಿಂಗ್ ಪದವೀಧರ. ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್‌ನ ಯಾಂತ್ರಿಕ ವಿಭಾಗದ ಮುಖ್ಯಸ್ಥರು. ಅವರ 'ಜಂಬೂಕ', 'ಯಶೋದಾ', 'ಪ್ರೀತಿ ಪ್ರೇಮ ಡ್ರಾಮಾ' ಕಾದಂಬರಿಗಳು 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿವೆ. 35ಕ್ಕೂ ಹೆಚ್ಚು ಕತೆಗಳು 'ಮಯೂರ' ಸೇರಿದಂತೆ ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.